o.s . 101/13
DW-1

2ನೇ ಅಧಿಕ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಅರಕಲಗೂಡು

(ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು)

ದಿಃ 02.03.2026

ಅಸಲು ದಾವಾ ನಂ. 101/2013

ಡಿ .ಡಬ್ಲೂ-1

(ಮುಂದುವರಿದ ಪಾಟೀ ಸವಾಲು ಶ್ರೀ ಓ. ಡಿ. ಜಿ. ವಕೀಲರಿಂದ ವಾದಿಯರ ಪರವಾಗಿ)

8 ಮತ್ತು 9ನೇ ಪ್ರತಿವಾದಿಯರಿಂದ ಕ್ರಯಕ್ಕೆ ತೆಗೆದುಕೊಂಡ ಜಮೀನಿನ ಮೇಲೆ ಈ ದಾವೆ ನಡೆಯುತ್ತಿದೆ ಎಂದರೆ ಸರಿ. ವಿಚಾರ ತಿಳಿದಿದ್ದರೂ ಸಹ ನಾನು ಸದರಿ ಜಮೀನಿನನ್ನು ಕ್ರಯಕ್ಕೆ ಪಡೆದಿರುತ್ತೇನೆ ಎಂದರೆ ಸರಿಯಲ್ಲ. ಈ ಹಿಂದೆ ಸದರಿ ಕ್ರಯದ ಬಗ್ಗೆ ವ್ಯವಹಾರ ನೆಡೆಸಿದ್ದೆವು ಎಂದರೆ ಸರಿಯಲ್ಲ. ಸದರಿ ಕ್ರಯ ಪತ್ರ ವಾದಿಗೆ ಬದ್ದಪಡುವುದಿಲ್ಲ ಎಂದರೆ ಸರಿಯಲ್ಲ. ಈ ಕೇಸಿನಲ್ಲಿ ವಾದಿಗೆ ಹಕ್ಕಿನ ತೀರ್ಮಾನವೇ ಆಗಿರುವುದಿಲ್ಲ ಆದರೂ ಕ್ರಯಕ್ಕೆ ತೆಗೆದುಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಓ. ಎಸ್. 204/2008 ನರಸಿಂಹೆಗೌಡ ಮತ್ತು ಲಕ್ಷ್ಮಮ್ಮ ನವರಿಗೆ ಸಂಬಂಧಿಸಿದ ದಾವೆ ಎಂದರೆ ಸರಿ. ಸದರಿ ದಾವೆಯು ನಮಗೆ ಸಂಬಂಧಿಸಿಲ್ಲ ಎಂದರೆ ಸಂಬಂಧಿಸಿದ್ದು. ಓ. ಎಸ್. 204/2008 ಈ ಕೇಸಿನಲ್ಲಿ ಹರೀಶ್ ರವನ್ನು ಪಕ್ಷಗಾರರನ್ನಾಗಿ ಮಾಡಿರುವುದಿಲ್ಲ ಎಂದರೆ ಸರಿ. ಸದರಿ ದಾವೆಯನ್ನು ನಡೆಸುತ್ತಿರುವ ವಕೀಲರು ಓ. ಎಸ್. 204/2008 ನಡೆಸುತ್ತಿದ್ದರು ಎಂದರೆ ಸರಿ. ವಾದಿ ಹೂಡಿರುವ ದಾವೆ ಇನ್ನೂ ತೀರ್ಪು ಬಂದಿರುವುದಿಲ್ಲ ಅದಕ್ಕೂ ಮೊದಲೇ ವಾದಿಗೆ ಸಂಬಂಧಿಸಿದ ಜಮೀನನ್ನು ಬರೆಸಿಕೊಂಡಿರುತ್ತೀರಾ ಎಂದರೆ ಸರಿಯಲ್ಲ. ಸದರಿ ಕ್ರಯಪತ್ರ ಸುಳ್ಳು ಎಂದರೆ ಸರಿಯಲ್ಲ. ಸದರಿ ಕ್ರಯ ಪತ್ರವನ್ನು ಬರೆದುಕೊಡಲು ಲಕ್ಷ್ಮಮ್ಮ ನಿಗೆ ಯಾವುದೇ ಹಕ್ಕು ಇಲ್ಲ ಎಂದರೆ ಸರಿಯಲ್ಲ. ಮಂಜುಳ ರವರಿಗೆ 3,85,000/- ರೂಗಳನ್ನು ಕೊಟ್ಟು ಕ್ರಯಪತ್ರ ಬರೆಸಿಕೂಂಡಿರುತೇನೆ ಮತ್ತು ರಘು ರವರಿಗೆ 3,85,000/- ರೂಗಳನ್ನು ಕೊಟ್ಟು ಕ್ರಯಪತ್ರ ಬರೆಸಿಕೂಂಡಿರುತ್ತೇನೆ ಎಂದರೆ ಸರಿ. ಸದರಿ ದಾವಾ ಸ್ವತ್ತು ಬೆಲೆ ಬಾಳುವ ಸ್ವತ್ತಾಗಿದ್ದು, ಅದನ್ನು ಅಕ್ರಮವಾಗಿ ಪಡೆಯುವ ಉದ್ದೇಶದಿಂದ ಸುಳ್ಳು ಕ್ರಯಪತ್ರ ಬರೆಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ನಾನು ಬರೆಸಿಕೂಂಡಿರುವ ಜಮೀನಿನಲ್ಲಿಯೂ ಸಹ ವಾದಿಗೆ ಹಕ್ಕು ಇದೆ ಎಂದರೆ ಸರಿಯಲ್ಲ. ನಾನು ಹಾಜರುಪಡಿಸಿರುವ ದಾಖಲೆಗಳು ಸುಳ್ಳು ಎಂದರೆ ಸರಿಯಲ್ಲ. ವಾದಿಗೆ ಮೋಸ ಮಾಡುವ ಸಲುವಾಗಿ ಲಕ್ಷ್ಮಮ್ಮ ಮತ್ತು ನಾನು ಷರಿಕ್ ಆಗಿ ಕ್ರಯಕ್ಕೆ ಪಡೆದಿರುತ್ತೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ  ಬೆರಳಚ್ಚು ನೀಡಲಾಯಿತು)

ಓ.ಹೇ.ಕೇ.ಸ.ಇದೆ.

2ನೇ  ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು,
ಜೆ.ಎಂ.ಎಫ್.ಸಿ, ಅರಕಲಗೂಡು